



ಸಾತಂತ್ರ್ಯಕ್ಕಾಗಿ, ನಮ್ಮ ಧರ್ಮದ ರಕ್ಷಣೆಗಾಗಿ ಯಾವುದೇ ಹೆಜ್ಜೆಯನ್ನಿಡಬಲ್ಲೆವು, ಇದು ನಮ್ಮ ಹಕ್ಕು. ದಬ್ಬಾಳಿಕೆ, ಅನ್ಯಾಯ ಮತ್ತು ಗುಲಾಮಗಿರಿ ಈ ಮೂರನ್ನು ಎದುರಿಸುವುದು ನಮ್ಮ ಮೊದಲ ಕರ್ತವ್ಯವಾಗಿದೆ. ಒಂದು ವೇಳೆ ಈ ಕರ್ತವ್ಯ ಪೂರೈಸುವಿಕೆಯನ್ನು ಅಪರಾಧ ಎಂದು ಹೇಳುವುದಾದರೆ, ನಾನು ಈ ಅಪರಾಧವನ್ನು ಮಾಡಿದ್ದೇನೆ. ನನ್ನ ಕೋಟ್ಯಂತರ ದೇಶವಾಸಿಗಳು ಇದೇ ಅಪರಾಧವನ್ನು ಮಾಡಿದ್ದಾರೆ. ನಾನು ಸದಾ ಇದೇ ಅಪರಾಧವನ್ನು ಮಾಡುತ್ತೇನೆ.'

ಮ್ಯಾಜಿಸ್ಟ್ರೇಟ್ ಮತ್ತು ಪೊಲೀಸ್ ಅಧಿಕಾರಿಗಳಿಗೆ ಈ ಭಾಷಣದಲ್ಲಿ ಹೊಸದೇನೂ ಇರಲಿಲ್ಲ. ಹೊಸತನವಿದ್ದರೆ ಅದು ಈ ಕೈದಿಯಲ್ಲಿ ಮಾತ್ರವಿತ್ತು. ಕೈದಿ ಹರಿಲಾಲ ಗಾಂಧಿಯಾಗಿದ್ದ ಬಾಪೂ ಪುತ್ರನಾಗಿದ್ದ. ಮ್ಯಾಜಿಸ್ಟ್ರೇಟರು ಹರಿಲಾಲನಿಗೆ ಆರು ತಿಂಗಳ ಜೈಲುಶಿಕ್ಷೆಯನ್ನು ವಿಧಿಸಿದರು. ತೀರ್ಮಾನ ಕೇಳುವಾಗ ಹರಿಲಾಲನ ಮುಖದಲ್ಲಿ ಯಾವುದೇ ಭಾವನೆ ವ್ಯಕ್ತಗೊಳ್ಳಲಿಲ್ಲ. ಯಾವುದೇ ಉತ್ಸಾಹವೂ ಕಾಣ ಬರಲಿಲ್ಲ. ಕಲ್ಕತ್ತಾದ ಜೈಲಿಗೆ ಹೋಗುವುದಕ್ಕೂ ಮೊದಲು ಹರಿಲಾಲ ಮಾಡಿದ ಮೊದಲ ಕೆಲಸವೆಂದರೆ, ಬಾ ಅವರಿಗೆ ಪತ್ರ ಬರೆದಿದ್ದು. ತನ್ನ ಈ ಜೈಲುವಾಸದ ಸುದ್ದಿಯನ್ನು ತಿಳಿಯುತ್ತಲೇ ಬಾ ಅವರ ಚಿಂತೆಗೆ ಮಿತಿಯಿರುವುದಿಲ್ಲ ಎಂಬ ವಿಶ್ವಾಸ ಅವನಿಗಿತ್ತು. ತಾನು ಆರಾಮಾಗಿದ್ದೇನೆ, ತನ್ನ ಆರೋಗ್ಯ ಸಹ ಉತ್ತಮವಾಗಿದೆ ಎಂದು ಸಹ ಬಾ ಅವರಿಗೆ ಬರೆದ. ಆದರೆ ಇನ್ನೂ ಆ ಪತ್ರ ಬಾ ಅವರಿಗೆ ತಲುಪಿರಲಿಲ್ಲ, ಆಗಲೇ ಜೈಲಿನ ಅಧಿಕಾರಿಗಳು ಹರಿಲಾಲನಿಗೆ ಒಂದು ತಂತಿ ಸಂದೇಶವನ್ನು ಕೊಟ್ಟರು. ತಂತಿಯನ್ನು ಬಾಪೂ ಅವರು ಕಳುಹಿಸಿದ್ದರು. ಹರಿಲಾಲನ ಬಂಧನದ ವಿಷಯವನ್ನು ಕೇಳಿ ಬಾಪೂ ಅವನನ್ನು ಅಭಿನಂದಿಸಿದ್ದರು. ನನಗೆ ಈ ನಿನ್ನ ಕಾರ್ಯದಿಂದ ತುಂಬಾ ಸಂತಸವಾಗಿದೆ, ನೀನು ಒಳ್ಳೆಯ ಕೆಲಸವನ್ನು ಮಾಡಿದ್ದೀಯ, ನನ್ನ ಆಶೀರ್ವಾದ ನಿನಗಿದೆ ಎಂದು ಬಾಪೂ ಕೊನೆಯಲ್ಲಿ ಬರೆದಿದ್ದರು.

ಹರಿಲಾಲ ಗದ್ಗದಿತನಾದ. ಇದ್ದಕ್ಕಿದ್ದಂತೆ ಅವನಿಗೆ ಮಕ್ಕಳ ನೆನಪಾಯಿತು. ಇನ್ನು ತಾನು ಆರು ತಿಂಗಳವರೆಗೆ ಹೊರಗಿನ ಪ್ರಪಂಚದಿಂದ ದೂರವಾಗಿರುತ್ತೇನೆ, ಮಕ್ಕಳು ಈಗ ತಿಳಿವಳಿಕೆ ಬಂದಿದೆ, ತಾಯಿಯಿಲ್ಲದ ಮಕ್ಕಳು ತಂದೆಯ ಜೈಲುವಾಸದಿಂದ ಅದೆಷ್ಟು ಅನಾಥಪ್ರಜ್ಞೆಯನ್ನು ಅನುಭವಿಸುತ್ತಿರಬಹುದು ಎಂದು ಹರಿಲಾಲ ಯೋಚಿಸಿದ.

ಹರಿಲಾಲನ ಈ ಅನಿರೀಕ್ಷಿತ ಜೈಲುವಾಸದಿಂದಾಗಿ 'ಆಲ್ ಇಂಡಿಯಾ ಸ್ಪೋರ್ಸ್ ಲಿಮಿಟೆಡ್' ಕಂಪನಿಯ ಕೆಲಸಕಾರ್ಯಗಳ ಮೇಲೆ ದುಷ್ಪರಿಣಾಮ ಬೀರುವುದು ಸಹಜವಾಗಿತ್ತು. ಇದುವರೆಗೆ ಮಾಲಿನ ಉತ್ಪಾದನೆ ಮತ್ತು ಮಾರಾಟದ ಯೋಜನೆಗೆ ರೂಪುರೇಷೆಗಳು ಸಿದ್ಧವಾಗಿರಲಿಲ್ಲ. ಹರಿಲಾಲನ ಹೆಸರಿನಲ್ಲಿ ಕಂಪನಿಯ ಶೇರುಗಳನ್ನು ಖರೀದಿಸಿದವರ ಸ್ಥಿತಿ ಹದಗೆಟ್ಟಿತು. ಇಂಥವರು ಮೊದಲು ಒಬ್ಬರಾಗಿ, ನಂತರ ಇಬ್ಬರಾಗಿ ಕಡೆಗೆ ಸಾಮೂಹಿಕವಾಗಿ ಕಲೆತು ಕಂಪನಿಯ ಕಚೇರಿಗೆ ಪತ್ರಗಳನ್ನು ಬರೆದು ಮಾಹಿತಿಯನ್ನು ಕೊಡುವಂತೆ ಕೇಳಲು ಆರಂಭಿಸಿದರು. ಹರಿಲಾಲ ಜೈಲಿಗೆ ಹೋಗಿದ್ದರಿಂದ ಕಚೇರಿಯ ಕೆಲಸ ಕಾರ್ಯಗಳು ನಿಂತು ಹೋಗಿದ್ದವು. ಅಷ್ಟೇ ಅಲ್ಲದೆ, ಶೇರುಗಳಿಂದ ಬಂದ ಹಣವನ್ನು ಹರಿಲಾಲ ಅಲ್ಲಿ ಇಲ್ಲಿ ಖರ್ಚು ಮಾಡಿದ್ದ. ಅವನೊಂದಿಗೆ ಕೂಡಿಕೊಂಡಿದ್ದ ಜನ, ಈ ಎಳ್ಳಿನಿಂದ ಮತ್ತಷ್ಟು ಎಣ್ಣೆಯನ್ನು ತೆಗೆಯಲು ಸಾಧ್ಯವಿಲ್ಲ ಎಂಬುದನ್ನು ತಿಳಿದು, ಹರಿಲಾಲನಿಂದ ದೂರವಾದರು. ಅಮರತಲ್ಲಾದಲ್ಲಿದ್ದ ಆ ಕಚೇರಿಯ ಬಾಡಿಗೆಯನ್ನು ಸಹ ಸಾಕಷ್ಟು ಸಮಯದಿಂದ ಕೊಟ್ಟಿರಲಿಲ್ಲ. ಆದರೆ ಹರಿಲಾಲ ಅದೇ ಸ್ಥಳದಲ್ಲಿ ಕಂಪನಿಯ ಕಚೇರಿಯನ್ನು ತೆರೆದಾಗ ಅಂಗಡಿಯ ಮಾಲೀಕನಿಗೆ ತನ್ನ ಬಾಡಿಗೆಯ ಬಗ್ಗೆ ಸ್ವಲ್ಪ ಆಸೆ ಮೂಡಿತ್ತು. ಆದರೆ ಈಗ ಅದೂ ಹೋಗಿತ್ತು. ದಿನೇದಿನೇ, ಸಾಲ ಕೊಟ್ಟ ಹೊಸ ಹೊಸ ಹಣವಂತರು ಅಲ್ಲಿಗೆ ಬಂದು ನಾನಾ ರೀತಿಯಲ್ಲಿ ಮಾತನಾಡುತ್ತಿದ್ದರು. ಇವೆಲ್ಲವನ್ನೂ ಕೇಳಿಕೇಳಿ ಮನೆಯ ಮಾಲೀಕನ ತಲೆ ಕೆಟ್ಟು ಹೋಗಿತ್ತು. ಹರಿಲಾಲನ ವಿರುದ್ಧ ಯಾರು, ಏನು ಮಾಡಬೇಕೆಂದು ಯಾರಿಗೂ ಹೊಳೆಯುತ್ತಿರಲಿಲ್ಲ, ಎಲ್ಲರ ವ್ಯಗ್ರತೆ ಹೆಚ್ಚುತ್ತಿತ್ತು.

ಕಡೆಗೆ ಅದೊಂದು ದಿನ ಮನೆಯ ಮಾಲೀಕ ಕಂಪನಿಯ ಸ್ಥಳವನ್ನು ಬಲಾತ್ಕಾರವಾಗಿ ತನ್ನ ವಶಕ್ಕೆ ತೆಗೆದುಕೊಂಡ. ದೀರ್ಘ ಸಮಯದಿಂದ ಅವನಿಗೆ ಬಾಡಿಗೆ ಹಣ ಲಭಿಸಿರಲಿಲ್ಲ ಎಂಬ ದೂರಿನ ಅನ್ವಯ ಅವನಿಗೆ ರಾತ್ರೋರಾತ್ರಿಯಲ್ಲಿ ಆ ಆದೇಶ ಸಿಕ್ಕಿತ್ತು. ಅವನು ಕಚೇರಿಯ ಬೀಗವನ್ನು ಒಡೆಸಿದ. ಕಚೇರಿಯಲ್ಲಿ ಯಾವ ವಸ್ತುಗಳೂ ಇರಲಿಲ್ಲ, ಕೆಲವು ಕಾಗದಪತ್ರಗಳು, ಫೈಲ್‌ಗಳು ಮಾತ್ರವಿದ್ದವು. ಅವನು ಅವನ್ನೆಲ್ಲಾ ಪಂಚನಾಮೆ ಮಾಡಿಸಿ, ನಿತ್ಯ ಅಲ್ಲಿಗೆ ವಸೂಲಿಗೆ ಬರುವವರಿಗೆ ಹೇಳಿದ, 'ಇನ್ನು ಇಲ್ಲಿ ಯಾವ ಹರಿಲಾಲನೂ ಇಲ್ಲ, ಇದು ಈಗ ಯಾವ 'ಆಲ್ ಇಂಡಿಯಾ ಸ್ಪೋರ್ಸ್ ಲಿಮಿಟೆಡ್' ಕಂಪನಿಯ ಕಚೇರಿಯಲ್ಲ.'

ನಂತರ ಮಾಲೀಕ ಹೊರ ಬಂದು ನೇತಾಡುತ್ತಿದ್ದ ಬೋರ್ಡನ್ನು ಕಳಚಿ, ಕಂಪನಿಯ ಹೆಸರನ್ನೇ ಹೇಳ ಹೆಸರಿಲ್ಲದಂತೆ ಮಾಡಿದ.

***

ಜೈಲಿನಿಂದ ಹೊರಗೆ ಘಟಿಸುತ್ತಿದ್ದ ಘಟನೆಗಳ ಬಗ್ಗೆ ಹರಿಲಾಲ ಅಪರಿಚಿತನಾಗಿದ್ದ. ಆರು ತಿಂಗಳ ನಂತರ ಜೈಲಿನಿಂದ ಹೊರ ಬಂದ ನಂತರವೇ ಅವನಿಗೆ ವಿಷಯಗಳು ತಿಳಿದವು. ಹರಿಲಾಲ ಜೈಲಿನಿಂದ ಬಿಡುಗಡೆಯಾಗಿ ಬಂದ ವಿಷಯವನ್ನು ತಿಳಿಯುತ್ತಲೇ ವಸೂಲಿಗಾರರು ಅವನ ಮನೆಯ ಬಾಗಿಲಿಗೆ ಬಂದು ಮುತ್ತಿಗೆ ಹಾಕಿ, ಹಣ ಮರಳಿ ಕೊಡುವಂತೆ ತಗಾದೆ ಮಾಡಿದರು. ಹರಿಲಾಲನಿಗೆ ಇವೆಲ್ಲವೂ ಅನಿರೀಕ್ಷಿತವಾಗಿದ್ದವು. ಕಚೇರಿ ಕೈ ತಪ್ಪಿಹೋಗಿತ್ತು, ಹರಿಲಾಲನೊಂದಿಗೆ ಸ್ನೇಹವನ್ನು ಬೆಳೆಸಿದ್ದ ಮುಸ್ಲಿಮ್ ಸ್ನೇಹಿತರು ವಸೂಲಿಯ ಈ ತಗಾದೆ ಎದುರು ಬೆನ್ನು ತಿರುಗಿಸಿ ಹೋಗಿದ್ದರು. ಇವೆಲ್ಲವನ್ನೂ ನೋಡಿ ಹರಿಲಾಲ ಕಕ್ಕಾಬಿಕ್ಕಿಯಾಗಿದ್ದ. ಜೈಲುವಾಸ ಸಹ ಅವನ ಆರೋಗ್ಯದ ಮೇಲೆ ಪರಿಣಾಮವನ್ನು ಬೀರಿತ್ತು. ಅದರೊಂದಿಗೆ ಈ ಹೊಸ ಚಿಂತೆ ಹರಿಲಾಲನನ್ನು ಆವರಿಸಿ ನಿಂತಿತ್ತು. ಜೈಲಿನಿಂದ ಬಿಡುಗಡೆಯಾದ ನಂತರ ಕೆಲವು ದಿನಗಳಿಗಾಗಿ ಮಕ್ಕಳನ್ನು ಇಲ್ಲಿಗೇ ಕರೆತರಲು ಬಯಸಿದ್ದ, ಆದರೆ ಈಗ ಅವನು ಇದಕ್ಕೆ ತಾನು ಅಸಮರ್ಥ ಎಂದು ಭಾವಿಸಿದ್ದ. ಸಾಕಷ್ಟು ದೀರ್ಘ ಸಮಯದಿಂದ ಹರಿಲಾಲ ತನ್ನ ಪರಿವಾರದವರೊಂದಿಗೆ ಇರಲು ಸಾಧ್ಯವಾಗಿರಲಿಲ್ಲ. ಮಕ್ಕಳನ್ನು ನೋಡಲು ಮನಸ್ಸು ಹಾತೊರೆಯುತ್ತಿತ್ತು. ಆದರೆ ಈಗ ಸಾಲ ಕೊಟ್ಟವರು ಬಂದು ಪೀಡಿಸುತ್ತಿದ್ದರು, ಇಂಥ ಪರಿಸ್ಥಿತಿಯಲ್ಲಿ ಮಕ್ಕಳನ್ನು ಇಲ್ಲಿಗೆ ಕರೆತರುವುದು ಸುತಾರಾಂ ಉಚಿತವಾಗಿರಲಿಲ್ಲ.

ಹರಿಲಾಲ ಮುಂಜಾನೆಯೇ ಮನೆಯಿಂದ ಹೊರಡುತ್ತಿದ್ದ. ಮನೆಯಲ್ಲಿರುವುದು ಕಷ್ಟವಾಗುತ್ತಿತ್ತು. ಮನೆಯ ಬಾಡಿಗೆಯನ್ನು ಕೊಡುವುದು ಸಹ ಸಾಧ್ಯವಿರಲಿಲ್ಲ. ಸಾಲ ಕೊಟ್ಟವರ ಆಕ್ರಮಣ ಹೆಚ್ಚುತ್ತಿತ್ತು. ಎಲ್ಲರಿಗೂ ಉತ್ತರ ಹೇಳಿ ಹೇಳಿ ವ್ಯಗ್ರನಾಗುತ್ತಿದ್ದ. ಇವೆಲ್ಲದರಿಂದ ಬಿಡುಗಡೆ ಹೊಂದಲು ಹಗಲಿಡೀ ಅಲ್ಲಿ ಇಲ್ಲಿ ವ್ಯರ್ಥವಾಗಿ ಅಲೆದಾಡುತ್ತಿದ್ದ, ಕಂಪನಿಯ ಹಣ ಎಂದೋ ಖರ್ಚಾಗಿತ್ತು; ಹೊರಗೆ ಎರಡು ಹೊತ್ತಿನ ತುತ್ತು ಅನ್ನ ತಿನ್ನಲು ಸಹ ಕಷ್ಟವಾಗುತ್ತಿತ್ತು. ಹಗಲಾಗುವುದಕ್ಕೂ ಮೊದಲೇ ತನಗಾಗಿ ಎರಡು ದಪ್ಪದಪ್ಪ ಸಜ್ಜೆ ರೊಟ್ಟಿಗಳನ್ನು ಮಾಡಿಕೊಂಡು, ಅವುಗಳನ್ನು ತಿಂದು ಹಸಿವೆಯನ್ನು ನೀಗಿಸಿಕೊಂಡು ಹೊರ ಹೋಗುತ್ತಿದ್ದ. ಮಿತ್ರರು ಅಥವಾ ಪರಿಚಿತರು ಭೇಟಿಯಾದಾಗ ಸಮಯ ನೋಡಿ ಕೈ ಖರ್ಚಿಗೆ ಸ್ವಲ್ಪ ಹಣವನ್ನು ಯಾಚಿಸುತ್ತಿದ್ದ; ನಂತರ ಹಗಲಿಡೀ ಅಗ್ಗದ ಸಾರಾಯಿ ಅಂಗಡಿಯಲ್ಲಿ ಕೂತು ದಣಿವನ್ನು ನೀಗಿಸಿಕೊಳ್ಳುತ್ತಾ ಅಲ್ಲಿಯೇ ಕಾಲವನ್ನು ಕಳೆಯುತ್ತಿದ್ದ. ಕತ್ತಲಾದ ನಂತರ ನಡುರಾತ್ರಿಗೆ ಮನೆಗೆ ಮರಳಿ ಬಂದು, ಕೈಕಾಲುಗಳನ್ನು ಮುದುಡಿ ನಿದ್ರಿಸುತ್ತಿದ್ದ.

ಆದರೆ ವ್ಯರ್ಥದ, ಅರ್ಥಹೀನದ ಅಲೆತ, ಹೆಚ್ಚು ದಿನ ನಡೆಯದಾಯಿತು. ಸಾಲ ಕೊಟ್ಟವರಿಗೆ ಹರಿಲಾಲ ತಪ್ಪಿಸಿಕೊಂಡು ಓಡಾಡುತ್ತಿರುವ ವಿಷಯ ತಿಳಿದಾಗ, ಅವರು ಮತ್ತು ಮನೆಯ ಮಾಲೀಕ ಅವನ ಮನೆಯ ಎದುರು ಧರಣಿ ಕೂತರು. ಈಗ ಹರಿಲಾಲನಿಗೆ ತಪ್ಪಿಸಿಕೊಳ್ಳಲು ಬೇರೆ ಮಾರ್ಗವಿರಲಿಲ್ಲ. ಎಲ್ಲರೂ ಉದ್ರೇಕದಿಂದ ಮಾತನಾಡಿ, ಬೆದರಿಕೆಯನ್ನು ಹಾಕುತ್ತಿದ್ದರು. ತಡರಾತ್ರಿ ಅವರು ಅಲ್ಲಿಂದ ಹೋದಾಗ, ಅಕ್ಕಪಕ್ಕದ ಮನೆಯವರು ತಮ್ಮ ನಿದ್ರೆ ಹಾಳಾಯಿತೆಂದು ಹರಿಲಾಲನನ್ನು ದೂಷಿಸುತ್ತಿದ್ದರು.

ಇನ್ನು ಹೆಚ್ಚು ದಿನ ತಾನು ಆ ಮನೆಯಲ್ಲಿ ಇರಲಾರೆ ಎಂದು ಹರಿಲಾಲನಿಗೆ ಅನ್ನಿಸಿತು. ಎಲ್ಲರೂ ಅವನನ್ನು ಕೆಟ್ಟ ರೋಗಿಯಂತೆ ಜಿಗುಪ್ಸೆಯಿಂದ ನೋಡುತ್ತಿದ್ದರು; ಹರಿಲಾಲನಿಗೆ ಇವರನ್ನು ಎದುರಿಸಲು ಸಾಧ್ಯವಾಗುತ್ತಿರಲಿಲ್ಲ. ಅವನು ತಾಳ್ಮೆಯನ್ನು ಕಳೆದುಕೊಂಡಾಗ ಜೇಬಿನಲ್ಲಿ ಉಳಿದ ಕೊನೆಯ ಹಣವನ್ನು ಸಾರಾಯಿ ಅಂಗಡಿಗೆ ಹೋಗಿ ಖರ್ಚು ಮಾಡುತ್ತಿದ್ದ ಅಥವಾ